ಮೈಸೂರ ಗೆಜಿಟ್ಟು.

ನಂ. 31 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 1, ಸನ್ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ ವರ್ಕಸ್ ಆಫೀಸರು. ಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷನ್‌ಗಳು.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಜುಲೈ 1885.

ಕ್ಯಾಂಪ್ ನಂಬರ್ 664.—ಸನ್ 1885ನೇ ಇಸವಿ ಜನವರೀ 29ನೇ ಮತ್ತು ಂ 215ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡಲ್ಪಟ್ಟ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಮುನ್ಸೀಫರುಗಳು ಅಮಲ್‌ದಾರ್ ವ ಡೆಪ್ಯುಟಿ ಅಮಲ್‌ದಾರರುಗಳು ಇವರುಗಳ ಮೊ ಕರರಾತಿ ಬಗ್ಗೆ ವಿಧಿಸಲ್ಪಟ್ಟ ಪರೀಕ್ಷೆಯ 8ನೇ ರೂಲಿಗೆ ಬದಲಾಗಿ ಇದರೆಡಿ ಬರುವದು ಸೇರಿಸಲ್ಪಡತಕ್ಕದ್ದು:—

"8. ಮದರಾಸ್ ಸ್ಪೆಷಲ್ ಟೆಸ್ಟ್ ಅಂದರೆ ಸಿವಿಲ್ ಮತ್ತು ಕ್ರಿಮಿನಲ್ ಹೈಯರ್ ಗ್ರೇಡ್ ಪರೀಕ್ಷೆಗಳನ್ನು 1886ನೇ ಇಸವಿ ಡಿಸಂಬರ್ 31ನೇ ಮತ್ತು ಮಿನ ವಳಗಾಗಿ ಕೊಟ್ಟು ತೇರ್ಗಡೆಯಾಗುವ ಯಲ್ಲ ಮನುಷ್ಯರುಗಳೂ ಈ ರೂಲ್‌ನಿಂದ ವಿಧಿಸಲ್ಪಟ್ಟ ಸಿವಿಲ್ ವ ಕ್ರಿಮಿನಲ್ ಪರೀಕ್ಷೆಯನ್ನು ಕೊಡುವದರಿಂದ ವಿನಾಯಿಸಲ್ಪಡತಕ್ಕದ್ದು.

ತಾರೀಖು 11ನೇ ಜುಲೈ 1885.

ಕ್ಯಾಂಪ್ ನಂ. 773.—ಕಡೂರು ತಾಲ್ಲೂಕಿನಲ್ಲಿರುವ ಕಸುವನಹಳ್ಳಿ ಗ್ರಾಮವು ಚಾಲ್ತಿ ಸರಕಾರಸಾಲ್ ಆಗಾಯತು, ಅರಸೀಕೆರೆ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತೆ.

ತಾರೀಖು 16ನೇ ಜುಲೈ 1885.

ನಂ. 72.—ಚಿಕ್ಕಬಳ್ಳಾಪುರದ ಮುನ್ಸೀಫ್ ತಿರುನಾರಣಾಚಾರಿ ಬಿ. ಎ. ಬಿ. ಎಲ್. ಯವರಿಗೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 25ನೇ ಸೆಕ್ಷನ್ 3ನೇ ಕ್ಲಾಜಿನಲ್ಲಿ ನಮೂದಿಸಲ್ಪಟ್ಟ ಅಧಿಕಾರಗಳ ಜೊತೆಯಲ್ಲಿ ಸದರೀ 25 (*a*) ಸೆಕ್ಷನ್‌ನಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳು, 2ನೇ ಕ್ಲಾಸ್ ಮಾಜಿಸ್ಟ್ರೇಟಿನ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತೆ. ಸದರೀ ಕೋಡಿನ 335ನೇ ಸೆಕ್ಷನ್ ನಿಯಮವನುಸರಿಸಿ, ಅವರು ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಮರ್ಥ್ಯವನ್ನು ಕನ್ನಡಬಾಷೆಯೊಳಗೆ ಸ್ವತಸ್ಸೂರ್ತಿ ತೆಗದುಕೊಳ್ಳುವಂತೆ ಸಹ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು 17ನೇ ಜುಲೈ 1885.

ನಂ. 73.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇದರಜೀ ಕಂಡ ಗ್ರಾಮಗಳ ವರ್ಗಾವರ್ಗಿಯು ಮಂಜೂರ್ಮಾಡಲ್ಪಟ್ಟಿದೆ :—

ತಿಜ್ಲಫಟ್ಟದ ತಾಲ್ಲೂಕಿನಿಂದ	ಕೋಲಾರ ತಾಲ್ಲೂಕಿಗೆ.
1 ಕಾಡಪಳ್ಳಿ	2 ಗುರುಪನಾಟ

ನಂ. 74.—ಬೆಂಗಳೂರನಲ್ಲಿ ಗವರ್ನ್‌ಮೆಂಟ್ ಪೊಟಾನಿಕಲ್ ಗಾರ್ಡನ್‌ಗಳ ಸೂಪರಿಟೆಂಡೆಂಟ್ ಮೆ॥ ಜೆ. ಕ್ಯಾಮಿರ್ಲ್ ಯವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಆಗಾಯತು, 4 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 16ನೇ ಜುಲೈ 1885.

ನಂ. 75.—ಸ್ ೯ 1879ನೇ ಇಸವಿಯ ಜುಡಿಶಿಯಲ್ ಸ್ಟ್ಯಾಂಪ್ ಆಕ್ಟಿನ 8ನೇ ಸೆಕ್ಷನ್‌ನಿಂದ ಕೊಡಲ್ಪಟ್ಟ ಅಧಿಕಾರಗಳೆನ್ನು ಚಲಾಯಿಸುವದರಲ್ಲಿ ಶ್ರೀಮತ್ ಮಹಾರಾಜಾ ಸರ್ಕಾರವರು ಹುಕ್ಕುಂ ಮಾಡುವದೇನೆಂದರೆ, ಬಂದು ಫಸಲಿನ ಯಾವ ಆಧಾರವೆ ಮೇಲಾಗಲಿ ಕೊಡಲ್ಪಟ್ಟ ಸಾಲವು ವಾಪಸು ಮಾಡುವ ಬಗ್ಗೆ ಹುಟ್ಟಿದ ಬಂದು ಬಡಂಬಿಡಿಕೆ ದಸ್ತಾವೇಜಿನ ಮೇಲೆ ವಸೂಲ್ಮಾಡಲ್ಪಡಬೇಕಾದ ಸ್ಟ್ಯಾಂಪು ಡ್ಯೂಟಿಯು, ಸದರೀ ಫಸಲು ಆಧಾರ ಕಾಲದಲ್ಲಿ ಇವ್ವಾಗ್ಯು ಅಥವಾ ಇಲ್ಲಿದಿವ್ವಾಗ್ಯೂ ಸರಿಯೆ, ಸದರೀ ಆಕ್ಟಿನ 1ನೇ ಪೆಡ್ಯೂಲಿನ 29ನೇ ಆರ್ಟಿಕಲ್ಲಿನ (*a*) ಅಥವಾ (*b*) ಕ್ಲಾಜಿನಲ್ಲಿ ನಮೂದುಮಾಡಲ್ಪಟ್ಟ ಕಾಲದವಳಗಾಗಿ ಸದರೀ ಸಾಲವು ಮಾಪತೀ ಮಾಡಲ್ಪಡುವದಾದ ಪಕ್ಷದಲ್ಲಿ, ಸದರೀ ಆರ್ಟಿಕಲ್ಲಿನ ಸಂದರ್ಭಾನುಸಾರ (*a*) ಯಾ (*b*) ಕ್ಲಾಜು ಅನುಸರಿಸಿ ವಸೂಲ್ಮಾಡಲ್ಪಡಬೇಕಾದ ಡ್ಯೂಟಿಯನ್ನು ವಿಾರಕೂಡದು.

ತಾರೀಖು 21ನೆ ಜುಲೈ 1885.

ನಂ. 82.—ರೆವಿನ್ಯೂ ವ ಜನರಲ್ ಇಲಾಖೆಗಳಲ್ಲಿ ಶ್ರೀವರ್ತಾರವರ ಸೆಕ್ರಿಟೇರಿಯವರಾದ ಮೆ॥ ವಿಜಯಿಂಸ್ಪರಾಯರಿಗೆ, 1885ನೇ ಇಸವಿ ಜೂನ್ 30ನೇ ಮತ್ತು ಂ 582ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಮಂಜೂರ್ಮಾಡಲ್ಪಟ್ಟಿದ್ದ ರಜಾಕ್ಕೆ ಜಾಸ್ತಿದಾಗಿ 14 ದಿವಸಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಜುಲೈ 1885.

ನಂ. 76.—ಸ್ ೯ 1885ನೇ ಇಸವಿ ಆಗಸ್ಟ್ ಗುರ್ತೆ ಆಗಾಯಿತು ಬೆಂಗಳೂರು ಅಡಿಷನಲ್ ಮುನ್ಸಿಫ್ ಕೋರ್ಟು ವೋಕೂಫ್ ಮಾಡಲ್ಪಟ್ಟಿರುವದಲ್ಲದೆ, ಸದರೀ ಕೋರ್ಟಿಗೆ ಕೊಡಲ್ಪಟ್ಟಿದ್ದ ಅಧಿಕಾರವು ಬೆಂಗಳೂರು ಮುನ್ಸಿಫ್ ಕೋರ್ಟಿಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 77.—ಸ್ ೯ 1885ನೇ ಇಸವಿ ಆಗಸ್ಟ್ ಗುರ್ತೆ ಆಗಾಯತು ಬಂದು ಅಡಿಷನಲ್ ಮುನ್ಸೀಫ್ ಕೋರ್ಟು, ಮೈಸೂರು ಷಹರ್ ವ ತಾಲ್ಲೂಕು ಇವುಗಳ ಸ್ಥಳಾಧಿಕಾರದೊಡನೆ ಮೈಸೂರಿನಲ್ಲಿ ಸ್ಥಾಪಿಸಲ್ಪಡತಕ್ಕದ್ದು.

ಮೇಲೆ ನಮೂದಿಸಿದ ತಾರೀಖು ಆಗಾಯತು ಮೈಸೂರು ಮುನ್ಸಿಫರು ತಿರಮಕೂಡ್ಲು ನರಸೀಪುರ ಮತ್ತು ಹುಣಸೂರು ತಾಲ್ಲೂಕುಗಳೊಳಗೆ ಸ್ಥಳಿಕ ಜುರಿಜನಲ್ ಅಧಿಕಾರವನ್ನು ಚಲಾಯಿಸತಕ್ಕದ್ದು.

ತಾರೀಖು 22ನೇ ಜುಲೈ 1885.

ನಂ. 78.—ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ಗಳವರಿಗೆ, ಬೆಂಗಳೂರು ಡಿಸ್ಟ್ರಿಕ್ಟಿನ ಸರಹದ್ದುಗಳೊಳಗೆ ಉಂಟಾಗುವ 100 ರೂ ಪಾಯಿ ಕಿಮ್ಮತ್ತಿಗೆ ಜಾಸ್ತಿಯಾಗದ ಮೊಕದ್ದಮೆಗಳಲ್ಲಿ ಬಂದು ಸ್ಮಾಲ್‌ಕಾಜ್ ಕೋರ್ಟಿನ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 79.—ಮೈಸೂರು ಮುನಿಸಿಫರಿಗೆ, ಮೈಸೂರು, ತಿರುಮಕೂಡ್ಲು ನರಸೀಪುರ ಮತ್ತು ಹುಣಸೂರು ಈ ತಾಲ್ಲೂಕುಗಳೊಳಗೆ ಉಂಟಾಗುವ 50 ರೂಪಾಯಿ ಕಿಮ್ಮತ್ತಿಗೆ ಜಾಸ್ತಿಯಾಗದ ಮೊಕದ್ದಮೆಗಳಲ್ಲಿ ಬಂದು ಸ್ಮಾಲ್‌ಕಾಜ್ ಕೋರ್ಟಿನ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 80.—ಮೆ॥ ಕೆ. ಆರ್. ಸುಬ್ಬರಾಯರ್ ಬಿ. ಎ. ಯವರು, ಮೈಸೂರು ಅಡಿಷನಲ್ ಮುನಿಸಿಫರಾಗಿ ನೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 81.—ಮೈಸೂರು ಅಡಿಷನಲ್ ಮುನಿಸಿಫರಾದ ಮೆ॥ ಕೆ. ಅರ್. ಸುಬ್ಬರಾಯರ್ ಬಿ. ಎ. ಯವರಿಗೆ, ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನೊಳಗೆ ಚಲಾಯಿಸಲ್ಪಡುವ ಬಗ್ಗೆ 2ನೇ ಕ್ಲಾಸ್ ಮೆಜಿಸ್ಟ್ರೇಟಿನ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 25ನೇ ಸೆಕ್ಷನ್ (a) ಕ್ಲಾಜಿನಲ್ಲಿ ನಮೂದಿಸಲ್ಪಟ್ಟ ಜಾಸ್ತಿ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತೆ.

ನಂ. 83.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತ್ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಾಸ್ತಿ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರ್ದ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ತಕ್ತೆಯಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪೂರತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಜೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪೂರತೀ ಮಾಡಿದ್ದರೆ ಜವಿನಾನುಗಳು ಅವ್ವೆಲ್ಲ ಕ್ರಯದಾರನ/ಖರ್ಚಿನಲ್ಲಿ ಪುನಃ ಸಾಕ್ಷಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮ್ಮೊಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಿಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ಹೊಣ್ಣಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜವಿನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಬಿಜ್ಜುಗಳು ದೇಬೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಪರಾಜು ಮುಕ್ತೂಫ್‌ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಾಜರ್ಮಾಡತಕ್ಕದ್ದು.

7. ದಿವಾನರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮವಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪೂರತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸ್ವಧರ್ಮ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡಿದ್ದೋಸ್ಕರ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬಿಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟ್, ತಾಲ್ಲೂಕ್, ಹೋಬ್ಳಿ.	ಗ್ರಾಮಗಳು.	ಜೋಕ್ತೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿಯ ಯಾ ಪೈರಿನ.	ಸರಕಾರಿನವರಿಗೆ ಕೊಡಬೇಕಾದ ಕಿಸ್ತು.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
			ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಪಿಂಗಳೂರು. ಪಂಗಳೂರು. ಜಾಲ	ಜೋಡಿಜಾಗಲೇಟಿ	ಕುಳ್ಳಪ್ಪ ವೆರ ಸಾ: ಕೃಷ್ಣಪ್ಪರಾವ್, ಇತರ ಇಬ್ಬರು	41 17 12	252 1 2	246 8 0	497 7 11	1885ನೇ ಇಸವಿ ಆಗಸ್ಟ್ 28ನೇ ಮುಂಜಾನೆ ಲ್ಲಿಬೆಂಗಳೂರು ತಾಲ್ಲೂಕು ಕಛೇರಿಯೊಳಗೆ ಅಮಲ್ದಾರ್ರ ರೂಬರು.
	ಜೋಡಿ ದಾಸನಾಯಕನಹಳ್ಳಿ	ಮಾನೇನಹಳ್ಳಿ ದಿವಾಕರಪ್ಪ, ಇತರ 50ಮಂದಿ	28 18 11½	56 0 0	51 4 0	211 15 3	ಡಿಟೋ 29ನೇ ಡಿಟೋ.

ತಾರೀಖು 24ನೇ ಜುಲೈ 1885.

ನಂ. 84.—ಸ್ಯ 1885ನೇ ಇಸವಿ ಮೇ 1ನೇ ಮುಕ್ತಂ 32ನೇ ನಂಬರ್ ಇನ್ಸ್ಟ್ರುಮೆಂಟ್‌ನಾಮ ಲಿಖಿತದಲ್ಲಿ ರಾಮಚಂದ್ರರಾಯರು ಪ್ರಿವಿಲೀಜ್ ರಜಾದ ಮೇಲೆ ಇದ್ದಪೂರಾ ಕಾಲದಲ್ಲಿ, ಎ. ಸುಬ್ಬಯ್ಯರವರು, ತುಮಕೂರು ತಾಲ್ಲೂಕು 3ನೇ ಗ್ರೇಡ್ ಅಮಲ್ದಾರ್ ಕರ್ಕ ಆಕ್ಟು ಮಾಡಿದಂತೆ ಭಾವಿಸಲ್ಪಡತಕ್ಕದ್ದು.

ನಂ. 85.—ತುಮಕೂರು ಡಿಸ್ಟ್ರಿಕ್ಟು ಕೇರಾ ತಾಲ್ಲೂಕು ಅಮಲ್ದಾರ್ ಕೆ. ವೆಂಕಟಚಲಯ್ಯನವರಿಗೆ ಅವರು ಉಪಯೋಗಿಸಿಕೊಳ್ಳೇವ ತಾರೀಖು ಲಾಗಾಯಿತು 10 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 86.—ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕು ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಹೇಮಾಪನುಮಂತಯ್ಯನವರಿಗೆ, ಅವರು ಉಪಯೋಗಿಸಿಕೊಳ್ಳುವೆ ತಾರೀಖು ಲಾಗಾಯಿತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತುಮಕೂರು ಡಿಸ್ಟ್ರಿಕ್ಟು ರೆವಿನ್ಯೂ ಸಿರಸ್ತೆದಾರ್ ಎ. ಸುಬ್ಬಅಯ್ಯನವರು, ಹನುಮಾನುಮಂತಯ್ಯನವರ ಗೈರ್ ಹಾಜರೀಯಲ್ಲಿ ಯಾವುತ್ತೊಂದು ಹುಕ್ಕುಂ ಕೊಡುವವರಿಗೆ, ಗುಬ್ಬಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್‌ರಾಗಿ ಆಕ್ಟು ಮಾಡುವಂತೆ ವೊಕರರ್‌ವೂ ಪಲ್ಪಟ್ಟಿರುತ್ತಾರೆ.

ನಂ. 87.—ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು, ಒಂದು ತಿಂಗಳವರಿಗೆ ಪ್ರಿವಿಲೀಜ್ ರಜಾಕೊಡಲ್ಪಟ್ಟಿರುತ್ತೆ.

ತುರುವೆಕೆರೆ ಡೆಪ್ಯುಟಿ ಅಮಲ್ದಾರ್ ಮಿರ್ ನಿಜಾಮುದ್ದೀನ್ ಅಲ್ಲಿರ್ವಾರು, ರಾಮಸ್ವಾಮಯ್ಯನವರ ಗೈರ್ ಹಾಜರಿಯಲ್ಲಿ ಯಾವುತ್ತೊಂದು ಹುಕ್ಕುಂ ಕೊಡುವವರಿಗೆ, ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟು ಮಾಡುವಂತೆ ವೊಕರರ್‌ನ್ಯಾಪಲ್ಪಟ್ಟಿರುತ್ತಾರೆ.

ಬಿ. ಜೋಜೇಅಪುಕ್ತುಂ,
ವಿ. ಮಾಧವರಾವ್,
ಆ|| ಸೆಕ್ರಿಟೇರಿ.